# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

## Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್–03/2026 ದಿನಾಂಕ: 12–01–2026

ಪ್ರಾಂಶುಪಾಲರು, (AN0011)
MOUNT CARMEL PU COLLEGE,
58 PALACE RD VASANTHNAGAR,
BENGALURU 560052.

ಮಾನ್ಯರೇ,

ವಿಷಯ: ಸಿಇಟಿ–2026 ಕ್ಕೆ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸುಲಭವಾಗುವ ನಿಟ್ಟಿನಲ್ಲಿ **"ಸಿಇಟಿ–2026–ದಿಕ್ಸೂಚಿ"** ಗಳನ್ನು ತಮ್ಮ ಜಿಲ್ಲೆಯ ಉಪನಿರ್ದೇಶಕರು ಶಾಲಾ ಶಿಕ್ಷಣ (ಪದವಿ ಪೂರ್ವ) ಇವರಿಂದ ಪಡೆದು ತಮ್ಮ ಕಾಲೇಜಿನ 684 ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವಿತರಿಸುವ ಕುರಿತು.

– –

ತಮ್ಮೆಲ್ಲರ ಸಹಕಾರದಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿಇಟಿ 2025ನೇ ಸಾಲಿನ ದಾಖಲೆಗಳ ಪರಿಶೀಲನೆಯನ್ನು ಮತ್ತು ಸೀಟು ಹಂಚಿಕೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇಂಜಿನಿಯರಿಂಗ್, ಕೃಷಿವಿಜ್ಞಾನ, ವೆಟರಿನರಿ, ಫಾರ್ಮಸಿ, ಮುಂತಾದ ವಿವಿಧ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯಲು ಸಿಇಟಿ–2026 ಅನ್ನು ದಿನಾಂಕ 23–04–2026 ಮತ್ತು 24–04–2026 ರಂದು ನಡೆಸಲು ಸರ್ಕಾರವು ನಿರ್ಧರಿಸಿರುತ್ತದೆ.

ತಮಗೆ ತಿಳಿದಿರುವಂತೆ ಸಿಇಟಿ–2026ರ ಆನ್ ಲೈನ್ ಅರ್ಜಿ ಸಲ್ಲಿಸುವಿಕೆಯು Application-cum-Verification Module ಆಗಿರುತ್ತದೆ. ಅಂದರೆ ಶಾಲೆಗಳ ವ್ಯಾಸಂಗ, ಕನ್ನಡ ಮಾಧ್ಯಮ ವಿವರಗಳನ್ನು SATS ಸಂಖ್ಯೆಯ ಆಧಾರದ ಮೇಲೆ ಪಡೆಯಲಾಗುತ್ತದೆ. ಅದೇ ರೀತಿ ಮೀಸಲಾತಿ ವಿವರಗಳನ್ನು ಜಾತಿ / ಜಾತಿ ಆದಾಯ ಪ್ರಮಾಣ ಪತ್ರಗಳಲ್ಲಿ ಮುದ್ರಿತವಾಗಿರುವ RD ಸಂಖ್ಯೆಯ ಮೂಲಕ ಕಂದಾಯ ಇಲಾಖೆಯಿಂದ ಪಡೆದುಕೊಳ್ಳಲಾಗುತ್ತದೆ.

ದಿನ ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ನೀಡುವ ಮೂಲಕ, ಯೂ ಟ್ಯೂಬ್ ಮೂಲಕ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಎಷ್ಟೇ ಮಾಹಿತಿ ನೀಡಿದರೂ ಸಹ ಸಾಮಾನ್ಯವಾಗಿ ವಿದ್ಯಾರ್ಥಿಗಳು ಅವರಿಗೆ ಗೊತ್ತಿಲ್ಲದಂತೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕೆಲವೊಂದು ತಪ್ಪುಗಳನ್ನು ಎಸುಗುತ್ತಿರುವುದು ತಮಗೆ ತಿಳಿದ ವಿಷಯವಾಗಿದೆ ಹಾಗೂ ಅಂತಹ ತಪ್ಪುಗಳನ್ನು ತಿದ್ದಿಕೊಳ್ಳಲು ಸಾಕಷ್ಟು ಬಾರಿ ಅವಕಾಶಗಳನ್ನು ನೀಡಿದರೂ ಸಹ ಮಾಹಿತಿ ಕೊರತೆಯಿಂದ ನಿಗದಿತ ಅವಧಿಯಲ್ಲಿ ಅವಕಾಶವನ್ನು ಸದ್ವಿನಿಯೋಗ ಪಡಿಸಿಕೊಳ್ಳದೆ ಸೀಟು ಹಂಚಿಕೆ ಪ್ರಾರಂಭವಾದ ನಂತರ ಅರ್ಜಿಯಲ್ಲಿನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ದೂರದ ಸ್ಥಳಗಳಿಂದ ಪ್ರಾಧಿಕಾರಕ್ಕೆ ಬರುತ್ತಿರುತ್ತಾರೆ. ಅರ್ಹತೆ ಇದ್ದರೂ ಅರ್ಜಿಯಲ್ಲಿ ಸರಿಯಾಗಿ ಅಗತ್ಯ ಮಾಹಿತಿಗಳನ್ನು ನೀಡದ ಕಾರಣ ಕೆಲವೊಮ್ಮೆ ಸೀಟು ಹಂಚಿಕೆಯಿಂದ ವಂಚಿತರಾಗುವುದನ್ನು ತಡೆಗಟ್ಟುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಆದ ಕಾರಣ ಪ್ರಾಧಿಕಾರವು ಸಿಇಟಿ–2026ಕ್ಕೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯೋಗವಾಗಲಿ ಎಂದು 2026ನೇ ಸಾಲಿನಲ್ಲಿ 2ನೇ ಪಿಯು / 12ನೇ ತರಗತಿಯನ್ನು ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸುವ ಹಾಗೂ ದಾಖಲೆಗಳ ಪರಿಶೀಲನೆಗೆ ಅಗತ್ಯವಿರುವ ಮಾಹಿತಿಯನ್ನೊಳಗೊಂಡ ಸಿಇಟಿ ದಿಕ್ಸೂಚಿಯನ್ನು ನೀಡಲು ಪ್ರಾಧಿಕಾರವು ನಿರ್ಧರಿಸಿದ್ದು, **ಸಿಇಟಿ ದಿಕ್ಸೂಚಿ ಪುಸ್ತಕಗಳನ್ನು ತಮ್ಮ ಜಿಲ್ಲೆಯ ಉಪನಿರ್ದೇಶಕರಿಂದ ಪಡೆದು ತಮ್ಮ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ 684 ವಿದ್ಯಾರ್ಥಿಗಳಿಗೆ ವಿತರಿಸಲು ಕೋರಿದೆ.**

–2–

ಎಲ್ಲಾ ಅಭ್ಯರ್ಥಿಗಳಿಗೆ ನೀಡಿದ ನಂತರ ಅವರಿಂದ ಒಂದು ಸ್ವೀಕೃತಿಯನ್ನು ಅನುಬಂಧ-1 ರಲ್ಲಿ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಲು ಕೋರಿದೆ.

ಪ್ರಸ್ತುತ ಸಿಇಟಿ 2026 ಕ್ಕೆ ಅರ್ಜಿ ಸಲ್ಲಿಸಲು ಸಿದ್ದಪಡಿಸಿಟ್ಟುಕೊಳ್ಳಬೇಕಾದ ಅಂಕ ಪಟ್ಟಿ ಮತ್ತು ಅಗತ್ಯವಿರುವ ಇತರೆ ದಾಖಲೆಗಳನ್ನು ಈ ಕೆಳಗೆ ವಿವರಿಸಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಾವುಗಳು ತಮ್ಮ ಕಾಲೇಜಿನ ಸೂಚನಾ ಫಲಕದಲ್ಲಿ ಈ ವಿವರಗಳನ್ನು ಪ್ರಾಮುಖ್ಯವಾಗಿ ಪ್ರಕಟಿಸಿ ಸಿಇಟಿ-2026ಕ್ಕೆ ಅರ್ಜಿ ಸಲ್ಲಿಸಲು ಅನುವಾಗುವಂತೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡುವಂತೆ ಕೋರಿದೆ.

## ಸಿಇಟಿ-2026ಕ್ಕೆ ಅರ್ಜಿ ಸಲ್ಲಿಸಲು ಸಿದ್ದಪಡಿಸಿಟ್ಟುಕೊಳ್ಳಬೇಕಾದ ದಾಖಲೆಗಳು / ಪ್ರಮಾಣ ಪತ್ರಗಳು

1. ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಮತ್ತು ಆಧಾರ್ ಕಾರ್ಡ್
2. ವಿದ್ಯಾರ್ಥಿಯ ಭಾವಚಿತ್ರ ಮತ್ತು ವಿದ್ಯಾರ್ಥಿಯ ಸಹಿ (ಜೆಪಿಜಿ ರೂಪದಲ್ಲಿ ಸ್ಕ್ಯಾನ್ ಮಾಡಿರುವ)
3. ವಿದ್ಯಾರ್ಥಿಯ ಮೊಬೈಲ್ (ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಓಟಿಪಿ ನಮೂದಿಸಲು)

**ಈ ಕೆಳಗಿನ ಪ್ರಮಾಣ ಪತ್ರಗಳು ಅನ್ವಯಿಸುತ್ತಿದ್ದಲ್ಲಿ ಮಾತ್ರ**

4. ಆರ್ ಡಿ ಸಂಖ್ಯೆ ಮುದ್ರಿತವಾಗಿರುವ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರ (ಎಸ್ ಸಿ, ಎಸ್ ಟಿ, ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ)
   ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಸರ್ಕಾರವು ಒಳಮೀಸಲಾತಿಯನ್ನು ಪ್ರವರ್ಗ-ಎ/ಪ್ರವರ್ಗ-ಬಿ/ಪ್ರವರ್ಗ-ಸಿ ಎಂದು ವರ್ಗೀಕರಣ ಮಾಡಿರುತ್ತದೆ, ಆದ್ದರಿಂದ ಒಳ ಮೀಸಲಾತಿ ವಿವರವನ್ನು ಮುದ್ರಿಸಿರುವ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಸೀಲ್ದಾರ್ ರವರಿಂದ ಪಡೆದು ಆರ್‌ಡಿ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸುವುದು.
5. ಆರ್ ಡಿ ಸಂಖ್ಯೆ ಮುದ್ರಿತವಾಗಿರುವ ಜಾತಿ ಆದಾಯ ಪ್ರಮಾಣ ಪತ್ರ (2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳಿಗೆ)
6. ಆರ್ ಡಿ ಸಂಖ್ಯೆ ಮುದ್ರಿತವಾಗಿರುವ 371 (ಜೆ) ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರ
7. ಆರ್ ಡಿ ಸಂಖ್ಯೆ ಮುದ್ರಿತವಾಗಿರುವ ಆದಾಯ ಪ್ರಮಾಣ ಪತ್ರ (ವಾರ್ಷಿಕ ಆದಾಯ ರೂ.8.00 ಲಕ್ಷಕ್ಕೂ ಕಡಿಮೆ ಇರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ)
8. 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ವ್ಯಾಸಂಗ ಪ್ರಮಾಣ ಪತ್ರ
9. 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ಓದಿರುವ ವ್ಯಾಸಂಗ ಪ್ರಮಾಣ ಪತ್ರ
10. ಆರ್ ಡಿ ಸಂಖ್ಯೆ ಮುದ್ರಿತವಾಗಿರುವ ಎನ್‌ಸಿಎಲ್‌ಸಿ ಪ್ರಮಾಣ ಪತ್ರ (ಗ್ರಾಮೀಣ ಪ್ರದೇಶದ ವ್ಯಾಸಂಗ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ)

ಮುಂದುವರಿದು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಮುದ್ರಿತವಾಗಿರುವ ಹೆಸರು, ಆಧಾರ್ ಕಾರ್ಡ್ ನಲ್ಲಿ ಮುದ್ರಿತವಾಗಿರುವ ಹೆಸರು ತಾಳೆಯಾಗುವುದು ಕಡ್ಡಾಯವಾಗಿದೆ ಮತ್ತು ಅದೇ ರೀತಿ ಜಾತಿ / ಜಾತಿ ಆದಾಯ ಪ್ರಮಾಣ ಪತ್ರಗಳಲ್ಲಿ ಮುದ್ರಿತವಾಗಿರುವ ಹೆಸರು ಸಹ ತಾಳೆಯಾಗುವುದು ಕಡ್ಡಾಯವಾಗಿದೆ. ಆದ್ದರಿಂದ ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಮುದ್ರಿತವಾಗಿರುವ ಹೆಸರು, ಆಧಾರ್ ಕಾರ್ಡ್ ನಲ್ಲಿ ಮುದ್ರಿತವಾಗಿರುವ ಹೆಸರನ್ನು ಒಮ್ಮೆ ಪರಿಶೀಲಿಸಿಕೊಳ್ಳಲು ಸೂಚಿಸಿ. ಒಂದು ವೇಳೆ ವ್ಯತ್ಯಾಸವಿದ್ದಲ್ಲಿ ಕೂಡಲೆ ಆಧಾರ್ ಕಾರ್ಡ್ ನಲ್ಲಿ ಸರಿಪಡಿಸಿಕೊಳ್ಳಲೂ ಸಹ ತಿಳಿಸಿ.

ತಮ್ಮ ಸಂಸ್ಥೆಯಲ್ಲಿ 2ನೇ ಪಿಯುಸಿ / 12ನೇ ತರಗತಿಯನ್ನು ಅಭ್ಯಸಿಸುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೂ ಸಿಇಟಿ-2026ಕ್ಕೆ ನೋಂದಣಿ ಮಾಡಿಕೊಂಡು ಸಿಇಟಿ ಪರೀಕ್ಷೆಗೆ ಹಾಜರಾಗಲು ತಿಳಿಸಲು ತಮ್ಮಲ್ಲಿ ಕೋರುತ್ತಾ ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆಯನ್ನು ತಮ್ಮ ಕಾಲೇಜಿನಲ್ಲಿ ಏರ್ಪಡಿಸುವ ಕುರಿತು ತಮಗೆ ಮಾಹಿತಿಯನ್ನು ಸದ್ಯದಲ್ಲಿಯೇ ಕಳುಹಿಸಲಾಗುವುದು.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ನಿರ್ದೇಶಕರು.